ಕರ್ನಾಟಕ ವಿಧಾನ ಸಭೆ

ಗುರುವಾರ 21ನೇ ಆಗಸ್ಟ್ 1997ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ 10.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು: ಇವತ್ತೂ ಧರಣಿ ನಡೆಸಿದ್ದೀರಿ. ಸಮಯ ವ್ಯಯ ಮಾಡುವುದು ಬೇಡ. 5 ನಿಮಿಷ ಸಭೆ ಮುಂದಕ್ಕೆ ಹಾಕುತ್ತೇನೆ. ಸರ್ಕಾರದ ಕಡೆಯಿಂದ ಯಾರಾದರೂ ಸಚಿವರು ಬನ್ನಿ. ವಿರೋಧಪಕ್ಷದವರೂ ಬನ್ನಿ. ಮಾತನಾಡೋಣ.

ಸದನವು 10 ಗಂಟೆ 39 ನಿಮಿಷಕ್ಕೆ ಮೂಂದೂಡಲ್ಪಟ್ಟು ಮತ್ತೆ 11 ಗಂಟೆಗೆ ಸೇರಲು ನಿಶ್ಚಯಿಸಿತು.

(ಸದನವು ಪುನಃ 11.20ಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ರವರು ಪೀಠವನ್ನಲಂಕರಿಸಿದರು)

(ಕಾಂಗ್ರೆಸ್ ಪಕ್ಷದ ಸದಸ್ಯರುಗಳಿಂದ ಸದನದ ಬಾವಿಯಲ್ಲಿ ಧರಣಿ)

ಅಧ್ಯಕ್ಷರು: ಮುಖ್ಯ ಮಂತ್ರಿಗಳು ನಿನ್ನೆ ಸದನದಲ್ಲಿ ಇರಲಿಲ್ಲ. ಆದ್ದರಿಂದ ನೀವು ನಿಮ್ಮ ಸ್ಥಾನಕ್ಕೆ ಬಂದು ನೀವು ಏನು ಹೇಳಬೇಕೆಂದಿದ್ದೀರಿ ಅದನ್ನು ಹೇಳಿ ನಂತರ ಮುಂದುವರಿಸಿ. ತಮ್ಮ ಸ್ಥಾನಕ್ಕೆ ಬಂದು ಹೇಳಿ. ಇದಕ್ಕೆ ಒಂದು ಪರಿಹಾರ ಹುಡುಕಲು ಪ್ರಯತ್ನಿಸೋಣ.

(1) ಎ.ಪಿ.ಎಂ.ಸಿಗೆ ಕೆಲವು ಸದಸ್ಯರುಗಳನ್ನು ನೇಮಕ ಮಾಡಿರುವುದನ್ನು ವಿರೋಧಿಸಿ ಧರಣಿ

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಸಾಯಂಕಾಲದಿಂದ ನಾವು ಇಲ್ಲಿ ಧರಣಿಯನ್ನು ಪ್ರಾರಂಭ ಮಾಡಿದ್ದೇವೆ. ಕಾರಣೆಂದರೆ, ಮೊನ್ನೆ ನಡೆದಂಥ ಎಪಿಎಂಸಿ ಚುನಾವಣೆಯಲ್ಲಿ, ಪಕ್ಷದ ಒಂದು ಆಧಾರದ ಮೇಲೆ ಚುನಾವಣೆ ನಡೆಯದೇ ಇದ್ದರೂ ಕೂಡ ಬಹುತೇಕ ಸದಸ್ಯರು ಯಾವಯಾವ ಪಕ್ಷಕ್ಕೆ ಸಂಬಂಧಪಟ್ಟಿದ್ದಾರೆ ಎನ್ನತಕ್ಕಂಥ ಐಡೆಂಟಿಫಿಕೇಷನ್ ಅಥವಾ ಮಾಹಿತಿ ಅವರ ಪಕ್ಷದಲ್ಲೂ ಇದೆ ಮತ್ತು ನಮ್ಮ ಪಕ್ಷದವರಿಂದಲೂ ಅದರ ಬಗ್ಗೆ ಮಾಹಿತಿ ಇದೆ. ಸುಮಾರು 140 ಎಪಿಎಂಸಿ ಕಮಿಟಿಗಳಲ್ಲಿ, ಬಳ್ಳಾರಿ ಮತ್ತು ಇತ್ತೀಚೆಗೆ ಆದ ನಡೆದ ಇನ್ನೊಂದೆರಡು ಚುನಾವಣೆಗಳನ್ನು ಸೇರಿಸಿಕೊಂಡರೆ ಸುಮಾರು 49ರಷ್ಟು